ಗಮನ ಸೆಳೆಯುವ ಸೂಚನೆಗಳು :

ವಿಷಯ: ಡಾಂಬರು ಸಿಮೆಂಟ್ ಮತ್ತು ಕಬ್ಬಿಣದ ಬೆಲೆಗಳ ಏರಿಕೆಯಿಂದ ಈಗಾಗಲೇ ಟೆಂಡರ್ ಆಗಿರುವ ಕಾಮಗಾರಿಗಳ ಕೆಲಸ ವಿಳಂಬವಾಗಿರುವ ಬಗ್ಗೆ.

ಶ್ರೀ ಹೆಚ್.ಡಿ ರೇವಣ್ಣ (ಮಾನ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ರಾಜ್ಯ ಹೆದ್ದಾರಿಗಳ 2005–08ರವರೆಗಿನ ಮೂರು ವರ್ಷದ ನಿರ್ವಹಣೆಯ ಯೋಜನೆಯಡಿಯಲ್ಲಿ 13,873ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಯನ್ನು ರೂ. 424.72ಕೋಟಿಗಳ ಮೊತ್ತದಲ್ಲಿ ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಗಳನ್ನು 42 ಪ್ಯಾಕೇಜುಗಳಲ್ಲಿ ತೆಗೆದುಕೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ ಕಾಮಗಾರಿಗಳಿಗೆ ಅಂದಾಜುಪಟ್ಟಿಗಳನ್ನು ಜನವರಿ 2005ರಲ್ಲಿ ತಯಾರಿಸಿದ್ದು ಅಂದಾಜು ಪಟ್ಟಿಗಳನ್ನು ತಯಾರಿಸುವಾಗ ಚಾಲ್ತಿಯಲ್ಲಿದ್ದ ಬಿಟುಮಿನ್ ದರಗಳನ್ನು ಅಳವಡಿಸಲಾಗಿದೆ.

ರಾಜ್ಯ ಹೆದ್ದಾರಿಯ ನಿರ್ವಹಣೆಯ ಕಾಮಗಾರಿಗಳು ಒಂದು ವರ್ಷದ ಅವಧಿಯಲ್ಲಿಯೇ ಪೂರ್ತಿಗೊಳಿಸಿ ಉಳಿದ ಎರಡು ವರ್ಷ ಅವುಗಳನ್ನು ನಿರ್ವಹಿಸುವುದಾಗಿರುವುದರಿಂದ ಈ ಕಾಮಗಾರಿಯ ಗುತ್ತಿಗೆಯಲ್ಲಿ ಯಾವುದೇ ದರದಲ್ಲಿನ ಹೆಚ್ಚುವರಿ (Price escalation) ನೀಡುವ ಅವಕಾಶವನ್ನು ಅಳವಡಿಸಿರುವುದಿಲ್ಲ.

ಆದರೆ ಗುತ್ತಿಗೆಯನ್ನು ನೀಡಿದ ನಂತರದ ಅವಧಿಯಲ್ಲಿ ಬಿಟುಮಿನ್ ದರದಲ್ಲಿ ಗಣನೀಯ ಏರಿಕೆಯಾಗಿರುವುದರಿಂದ ಗುತ್ತಿಗೆದಾರರು ಸರ್ಕಾರಕ್ಕೆ ಮತ್ತು ಕೆ.ಆರ್.ಡಿ.ಸಿ.ಎಲ್. ಗೆ ಕಾಮಗಾರಿಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ಮತ್ತು ಈ ಹೆಚ್ಚುವರಿ ದರವನ್ನು ಪರಿಹಾರವಾಗಿ ನೀಡಲು ವಿನಂತಿಸಿರುತ್ತಾರೆ.

ಗುತ್ತಿಗೆ ಕರಾರಿನ ಅನ್ವಯ ಗುತ್ತಿಗೆದಾರರು ಒಪ್ಪಿರುವ ದರಗಳಿಗೆ ಅನುಸಾರವಾಗಿ ಕಾಮಗಾರಿಗಳನ್ನು ಪೂರೈಸುವುದಕ್ಕೆ ಅವರು ಜವಬ್ದಾರರು. ಕಾಮಗಾರಿಗಳ ಅವಧಿ 18 ತಿಂಗಳಿಗೆ ಅಧಿಕವಿದ್ದಲ್ಲಿ, ಆ ಕಾಮಗಾರಿಯ ಗುತ್ತಿಗೆ ಕರಾರಿನಲ್ಲೇ ಸಾಮಗ್ರಿಗಳ ದರ ಹೆಚ್ಚಳವಾದಲ್ಲಿ ಬೆಲೆಸೂಚಿ ಆಧಾರದ ಮೇಲೆ (Price index) ಗುತ್ತಿಗೆದಾರರಿಗೆ ಅದಕ್ಕೆ ತಕ್ಕಂತೆ ಹೆಚ್ಚುವರಿ ನೀಡಬಹುದಾಗಿರುತ್ತದೆ. ಆದಾಗ್ಯೂ ಕಳೆದ ಆರು ತಿಂಗಳಲ್ಲಿ ಡಾಂಬರು,

ಸಿಮೆಂಟ್ ಹಾಗೂ ಉಕ್ಕುಗಳ ಬೆಲೆಯು ಅನಿರೀಕ್ಷಿತವಾಗಿ ಭಾರಿ ಹೆಚ್ಚುವರಿಯಾಗಿರುವ ಹಿನ್ನೆಲೆಯಲ್ಲಿ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇವರು ಟೆಂಡರ್ ಆಗುವಾಗ ಸುಮಾರು ಅಕ್ಟೋಬರ್‌ನಲ್ಲಿ ಡಾಂಬರ್‌ನ ರೇಟ್ ಒಂದು ಟನ್‌ಗೆ 12,000–00 ರೂಪಾಯಿಗಳು ಇತ್ತು. ಡಿಸೆಂಬರ್‌ನಲ್ಲಿ 17,490–00 ರೂಪಾಯಿಗಳಾಯಿತು. ಆಮೇಲೆ ಮಾರ್ಚಿ ತಿಂಗಳಲ್ಲಿ 18,770–00 ರೂಪಾಯಿಯಾಯಿತು. ಏಪ್ರಿಲ್ ತಿಂಗಳಿನಲ್ಲಿ 19,070–00 ರೂಪಾಯಿಯಾಯಿತು. ಆಮೇಲೆ ಜೂನ್ ತಿಂಗಳಲ್ಲಿ 19,587–00 ಸುಮಾರು 20,000/– ಅದೂ ಎಂ.ಆರ್.ಪಿ.ಎಲ್. ರೇಟ್ ಅಧ್ಯಕ್ಷರೇ. ಮಂಗಳೂರಿನ ರೀಫೈನ್ರಿ ಆ ಮಟ್ಟದ ರೇಟ್. ಟ್ರಾನ್ಸ್‌ಪೋರ್ಟೇಷನ್ ಎಕ್ಸ್‌ಟ್ರಾ ಆಗುತ್ತದೆ. ಅಂದರೆ 12,000/– ರೂಪಾಯಿ ಟನ್‌ಗೆ ಇದ್ದಂಥ ಸಮಯದಲ್ಲಿ ಆ ಗುತ್ತಿಗೆದಾರರು ಟೆಂಡರ್ ಹಾಕಿಕೊಂಡಿದ್ದರು. ಮಾನ್ಯ ಮಂತ್ರಿಗಳ ಹೇಳಿದ ಹಾಗೆ ಕಂಡೀಷನ್ ಇದೆ. ಜಾಸ್ತಿ ಮಾಡಿಕೊಡಬೇಕೆನ್ನುವುದು ಏನೂ ಇಲ್ಲ. ಆ ಗುತ್ತಿಗೆದಾರರು ನಮ್ಮ ರಾಜ್ಯದವರೇ, ಬೇರೆಯವರು ಏನೂ ಅಲ್ಲ, ಸ್ಟೇಟ್ ಹೈವೇ ಮೆಂಟೇನೆನ್ಸ್‌ಗೋಸ್ಕರ ಕೊಟ್ಟಿದ್ದಾರೆ. ನೋಡಿ ಅಧ್ಯಕ್ಷರೇ, ಒಂದು ಉದಾಹರಣೆಗೆ ಹೇಳುತ್ತೇನೆ. ಶಿವಮೊಗ್ಗ ಒಂದು ಜಿಲ್ಲೆಯಲ್ಲಿ ಪ್ಯಾಕೇಜ್ 11 ಕೋಟಿ 77 ಲಕ್ಷ ರೂಪಾಯಿ, ಒಂದು ಜಿಲ್ಲೆಗೆ ಒಟ್ಟು 20 ಕೋಟಿ ರೂಪಾಯಿಗಳ ಪ್ಯಾಕೇಜ್. ಇವತ್ತು ಈ ದರದ ವ್ಯತ್ಯಾಸ ಇವತ್ತು ಈ ಡಾಂಬರ್ ಉಪಯೋಗಿಸಿ ಆಸ್‌ಫಾಲ್ಟ್ ಮಾಡಿದರೆ ನಾಲ್ಕು ಕೋಟಿ ಇಪ್ಪತ್ತು ಲಕ್ಷಗಳು ನಷ್ಟವಾಗುತ್ತದೆ. ಅದು ಕಡಿಮೆ ಅಂದಾಜು ಆಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಒಂದು ಬಾರಿ ಅವರಿಗೆ ಉತ್ತರವನ್ನು ಕೊಟ್ಟ ಮೇಲೆ ಅದು ನಿಯಮ 69ಕ್ಕೆ ಕನ್ವರ್ಟ್‌ಮಾಡಲಿಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಹೌದು, ಕನ್ವರ್ಟ್ ಮಾಡಲಿಕ್ಕೆ ಬರುವುದಿಲ್ಲ. ಕ್ಲಾರಿಫಿಕೇಷನ್‌ಗಷ್ಟೆ.

ಶ್ರೀ ಎನ್.ಎಸ್. ಬೋಸ್‌ರಾಜು: ಇದು ಬಹಳ ಗಂಭೀರವಾದ ಸಮಸ್ಯೆ. ದಯವಿಟ್ಟು ಕೇಳಿ. ಈಗ ಮಾನ್ಯ ರೇವಣ್ಣನವರು ಬಂದಿದ್ದಾರೆ. ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಎಸ್ಟಿಮೇಟ್ ಕಮಿಟಿಯಲ್ಲಿ ನಾವು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ಹೇಳುತ್ತೇನೆ. ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈಗ ಒಂದು ಬಾರಿ ರಿಪ್ಲೈ ಮಾಡಿದರೆ ಆಮೇಲೆ ಅದನ್ನು ರೂಲ್ 69 ಕನ್ವರ್ಟ್ ಮಾಡಲಿಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಅವರು ರಿಪ್ಲೈ ಮಾಡಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಈಗ ನನ್ನ ವಿನಂತಿ ಇಷ್ಟೆ, ಮಾನ್ಯ ಎಲ್ಲಾ ಶಾಸಕರೂ ಕೂಡ ಆಸಕ್ತಿ ತೋರಿಸುತ್ತಿದ್ದಾರೆ. ಮತ್ತು ಇದು ರಾಜ್ಯದ ಸಮಸ್ಯೆ. ಇಡೀ ರಾಜ್ಯದಲ್ಲಿ ನಿಂತು ಹೋಗಿದೆ. ಮಾನ್ಯ ರೇವಣ್ಣನವರ ಹಾಸನ ಜಿಲ್ಲೆಯಲ್ಲಿ 1 ಕಿ.ಮೀ. ಕೂಡ ಆಸ್‌ಫಾಲ್ಟ್ ಮಾಡಲಿಲ್ಲ. ದುದ್ದಾದಲ್ಲಿ ಮೊನ್ನೆ ಲಾಠಿ ಚಾರ್ಜ್ ತುಂಬಾ ದೊಡ್ಡ ಗಲಾಟೆಯಾಯಿತು. ಮಾನ್ಯ ಸಚಿವರದ್ದೂ ಕೂಡ ಬಹಳ ಸಮಸ್ಯೆಯಾಗಿದೆ. ಎಲ್ಲಾ ಕಡೆಯಿಂದ ಕೂಡ ನಿಂತು ಹೋಗಿದೆ. ಇದನ್ನು ರೂಲ್ 69ಕ್ಕೆ ಕನ್ವರ್ಟ್ ಮಾಡಿ ತಾವು ಎಲ್ಲರಿಗೂ ಕೂಡ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆ ಬಗ್ಗೆ ರೂಲ್ 69 ಕನ್ವರ್ಟ್ ಮಾಡಬೇಕಾಗಿದ್ದಲ್ಲಿ ಒಂದು ನೋಟಿಸ್ ಅನ್ನು ಕಳುಹಿಸಿ. I can't convert.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಿಮ್ಮ ಡಿಸ್ಕ್ರಿಷನರಿ ಪವರ್ ಅನ್ನು ಉಪಯೋಗಿಸಿ.

ಅಧ್ಯಕ್ಷರು: ಇಲ್ಲ. ಹಾಗಾಗುವುದಿಲ್ಲ. ಏನಾಗಿದೆಯೆಂದರೆ ಅವಕಾಶ ಕೊಟ್ಟಿದ್ದೇನೆ, ಅವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. Let him send a notice.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್, ಒಂದು ನಿಮಿಷ, ತಾವು ರೂಲ್ 69ಕ್ಕೆ ಕನ್ವರ್ಟ್ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್: ರೂಲ್ 69ಕ್ಕೆ ತಾವು ಕನ್ವರ್ಟ್ ಮಾಡಿದರೆ ಈಗಲೇ ನಾವು ಚರ್ಚೆಗೆ ತೆಗೆದುಕೊಳ್ಳಬಹುದು ಸರ್. ಈಗಲೇ ಚರ್ಚೆಗೆ ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು: ಇಲ್ಲಿ ಚರ್ಚೆಗೆ ಇನ್ನು ಬೇರೆ ವಿಷಯಗಳಿವೆ, ನೀವು ನೋಟಿಸ್ ಕಳುಹಿಸಿ, ಪ್ಲೀಸ್.

ಶ್ರೀ ಎನ್.ಎಸ್. ಬೋಸ್‌ರಾಜು: ಈಗ ಅಧಿಕಾರ ಇರುವಾಗ, ನೀವು ಹೀಗೆ ಹಿಂದು ಮುಂದು ನೋಡಿದರೆ ಹೇಗೆ?

ಅಧ್ಯಕ್ಷರು: ಈಗ ನಾನು ಹೇಳಿದ್ದೇನಲ್ಲಾ, ಅವರು ನೋಟೀಸ್ ಕಳುಹಿಸುತ್ತಾರೆ ಬಿಡಿ. ಸೋಮವಾರ ತೆಗೆದುಕೊಳ್ಳೋಣ. ಈಗ ಆಗುವುದಿಲ್ಲ. ಇದಾದ ಮೇಲೆ ಮಾಧುಸ್ವಾಮಿ, ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿಯವರು ಹೊಸ ಅಂಗನವಾಡಿ ಬಗ್ಗೆ ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ : ಸರ್, ನನ್ನ ವಿಷಯ ಪೂರ್ಣವಾಗಲಿಲ್ಲ.

ಅಧ್ಯಕ್ಷರು: ಮಾನ್ಯ ಜ್ಞಾನೇಂದ್ರರವರೇ, ನೀವು ನೋಟಿಸ್ ಕಳುಹಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ರೂಲ್ 69ಕ್ಕೆ ಒಂದು ನೋಟಿಸ್ ಕಳುಹಿಸಿ.

ಶ್ರೀ ವಾಟಾಳ್ ನಾಗರಾಜ್: ರೂಲ್ 69ರ ಬಗ್ಗೆ ನೀವು ಚರ್ಚೆ ಆರಂಭ ಮಾಡಿ. ಇದಾದ ನಂತರ ಕೊಡುತ್ತಾರೆ ನೀವೇ ಮಾತನಾಡಿ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು): ನೋಟಿಸ್ ಕೊಡದಿದ್ದರೆ, ಅಧ್ಯಕ್ಷರು ರೂಲ್ 69ಕ್ಕೆ ಕನ್ವರ್ಟ್ ಮಾಡಲಿಕ್ಕೆ ಬರುವುದಿಲ್ಲ.

ವಿಷಯ: ಸಹಾಯಕಿಯರನ್ನು ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಕ ಮಾಡುವ ಪ್ರಕ್ರಿಯೆಯಲ್ಲಿ ಗೊಂದಲ ಸ್ಪಷ್ಟಯಾಗಿರುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಸಹಾಯಕಿಯರನ್ನು ಮತ್ತು ಕಾರ್ಯಕರ್ತೆಯರನ್ನು ನೇಮಕ ಮಾಡುವ ಪ್ರಕ್ರಿಯೆಯಲ್ಲಿ ಏನು ಗೊಂದಲ ಸೃಷ್ಟಿಯಾಗಿದೆ, ಆ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ.ಪಿ ಪ್ರಕಾಶ್ (ಮಾನ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ನಾನು ಈ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ಓದುತ್ತೇನೆ.

ರಾಜ್ಯದಲ್ಲಿ 40,301 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ, 11,313 ಅಂಗನವಾಡಿ ಕೇಂದ್ರಗಳನ್ನು ಹೆಚ್ಚುವರಿಯಾಗಿ ಪ್ರಾರಂಭಿಸಲು 2005–06ನೇ ಸಾಲಿನ ಅಂತ್ಯದಲ್ಲಿ ಕೇಂದ್ರ ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಈ ಹೊಸದಾಗಿ ಮಂಜೂರಾದ 11,313 ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ಈ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರನ್ನು ಗುರುತಿಸುವ ಪ್ರಕ್ರಿಯೆ ರಾಜ್ಯದ ಎಲ್ಲಾ 27 ಜಿಲ್ಲೆಗಳಲ್ಲಿ ನಡೆದಿರುತ್ತದೆ.

ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆಯರನ್ನು ಗುರುತಿಸಲು ಪ್ರತಿ ತಾಲ್ಲೂಕಿನಲ್ಲಿ ಒಂದು ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯಿರುತ್ತದೆ. ಈ ಸಮಿತಿ ಅಧ್ಯಕ್ಷರಾಗಿ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾ ಅಧಿಕಾರಿಗಳು ಇರುತ್ತಾರೆ. ಉಪಾಧ್ಯಕ್ಷರಾಗಿ ಜಿಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿರುತ್ತಾರೆ.